## ಇಲ್ಲಿಯವರೆಗೆ



ರಾಷ್ಟ್ರಮಟ್ಟದ ಕ್ರೀಡಾಪಟುವಾಗಿ ಗುರ್ತಿಸಿಕೊಂಡ ನಂತರವೂ ಭಾವೇಶ್‌ರ ಮನಸ್ಸಿಗೆ ತೃಪ್ತಿಯಿರಲಿಲ್ಲ. ಅವರ ಧ್ಯೇಯ ಬೇರೆಯದೇ ಇತ್ತು. ತಮ್ಮ ಬದುಕು ಹಸನಾದರಷ್ಟೇ ಸಾಲದು, ತಮ್ಮಂತೆಯೇ ಅಂಧರಾಗಿರುವ ಮಿತ್ರರ ಬದುಕಿಗೂ ಏನಾದರೂ ಮಾಡಬೇಕು ಎಂದು ಮದುವೆಯ ಸಂದರ್ಭದಲ್ಲೇ ನಿರ್ಧರಿಸಿದ್ದರು. ಹೊಸ ಕನಸು, ಹೊಸ ಆಕಾಶ ಅವರನ್ನು ಕಾಡತೊಡಗಿತು. ಆ ಕನಸಿನ ದಾರಿಯಲ್ಲೇ ಒಂದಷ್ಟು ಅಂಧ ಮಿತ್ರರನ್ನು ಭಿಕ್ಷಾಟನೆಯಿಂದ ಹೊರತಂದು ಮೋಂಬತ್ತಿ ತಯಾರಿಕೆ ಕೆಲಸದಲ್ಲಿ ಸೇರಿಸಿಕೊಂಡರು. ಅಂಥ ಮಿತ್ರರ ಬಳಗ ದೊಡ್ಡದಾಯಿತು. ಉತ್ಪಾದನೆಯೂ ದೊಡ್ಡದಾಯಿತು. ಆದರೆ, ಮಾರುಕಟ್ಟೆ ಎಲ್ಲಿದೆ? ಮತ್ತೆ ಕೈ ಹಿಡಿದದ್ದು ಮಾನವೀಯತೆಯೇ; ಸಹೃದಯಿ ಮನಸ್ಸುಗಳೇ.

ಸ್ವಾವಲಂಬನೆಯ ಹಾದಿಯಲ್ಲಿ ಹೆಜ್ಜೆ ಇಡಿಸುವುದು ಭಾವೇಶರ ಬದುಕಿನ ಗುರಿಯಾಗಿತ್ತು. ನಾನು ಕಡೇ ಪಕ್ಷ ಹತ್ತು ಸಾವಿರ ಮಂದಿ ಅಂಧರಿಗೆ ಜೀವನೋಪಾಯದ ಮಾರ್ಗ ಕಲ್ಪಿಸಿಕೊಡಬೇಕು, ಹಾಗಾದಲ್ಲಿ ನನಗೆ ಬದುಕಿರುವಂತೆಯೇ ಮುಕ್ತಿ ದೊರೆಯಿತು ಎಂದು ಭಾವಿಸುವುದಾಗಿ ಭಾವೇಶ್ ಹೇಳಿದ್ದರು.

* * *

2008ರ ಜುಲೈ ತಿಂಗಳಿನ ಮಾತು. ಒಂದು ದಿನ ಏಕಾಏಕಿ ಸಂಜಯ್ ಮಸಂದ್ ಅವರ ಫೋನ್ ಬಂದಿತು. ಆ ದಿನಗಳಲ್ಲಿ ಅವರು ರಿಲಾಯನ್ಸ್ ಫೌಂಡೇಶನ್‌ನ 'ದೃಷ್ಟಿ' ಪ್ರಾಜೆಕ್ಟ್‌ನ ಪ್ರಮುಖ ಅಧಿಕಾರಿಗಳಲ್ಲಿ ಒಬ್ಬರಾಗಿದ್ದರು. ಅವರು ಭಾವೇಶ್ ಅವರನ್ನು ಮುಂಬಯಿಗೆ ಬರಲು ಹೇಳಿದರು. ಭಾವೇಶ್ ನೀತಾರೊಡನೆ ದಕ್ಷಿಣ ಮುಂಬಯಿಯ ನಾರಿಮನ್ ಪಾಯಿಂಟ್ ಸ್ಥಳವನ್ನು ತಲುಪಿದರು. ಅಲ್ಲಿ ಮೇಕರ್ ಛೇಂಬರ್‌ನ ನಾಲ್ಕನೇ ಮಹಡಿಯಲ್ಲಿ ಅವರ ಉಪಾಧ್ಯಕ್ಷರನ್ನು ನೋಡಬೇಕಿತ್ತು. ಅವರ ಬಳಿ ವಿದೇಶದಿಂದ ಬಂದ ಒಂದು ಮೋಂಬತ್ತಿ ಇದ್ದಿತು. ಅದರಿಂದ ವಿಶಿಷ್ಟವಾದ ಸುಗಂಧ ಹೊರಹೊಮ್ಮುತ್ತಿತ್ತು. ಅವರು ಭಾವೇಶ್ ಅವರಿಗೆ ಇದೇ ರೀತಿಯ ಮೋಂಬತ್ತಿಯ ಒಂದು ಸ್ಯಾಂಪಲ್ ಮಾಡಿ ಕೊಡುವಂತೆ ಕೇಳಿದರು. ಆ ಆಕಾರದ ಮೋಂಬತ್ತಿ ತಯಾರಿಸುವುದು ಭಾವೇಶ್ ಅವರಿಗೇನೂ ಕಷ್ಟವಿರಲಿಲ್ಲ. ಆದರೆ ತೊಂದರೆ ಇದ್ದದ್ದು ಆ ಬಗೆಯ ಸುಗಂಧವನ್ನು ಹುಡುಕುವುದು.

ಭಾವೇಶ್ ತಮ್ಮ ಅರೋಮ್ಯಾಟಿಕ್ ಎಣ್ಣೆಗಳ ಸರಬರಾಜುದಾರನೊಡನೆ ಕುಳಿತು, ಆ ರೀತಿಯ ಸುಗಂಧವನ್ನು ತಯಾರಿಸುವತ್ತ ತೊಡಗಿದರು. ಬಹಳಷ್ಟು ಪರಿಶ್ರಮದ ನಂತರ ಅಂತಹುದೇ ಸುಗಂಧವನ್ನು ಪಡೆಯುವಲ್ಲಿ ಸಮರ್ಥರಾದರು. ಅವರು ಕೇಳಿದಂತಹ ಪ್ರಾಡಕ್ಟ್ ಸಿದ್ಧ ಮಾಡಲು ನಾಲ್ಕೈದು ಪ್ರಕಾರದ ಮೇಣವನ್ನು ಒಟ್ಟಿಗೆ ಸೇರಿಸಬೇಕಿತ್ತು. ಅದರಲ್ಲಿ ಒಂದು ಪ್ರಕೃತಿಯಲ್ಲಿ ದೊರೆಯುವ ಜೇನುಗೂಡಿನ ಮೇಣವಾಗಿತ್ತು. ಅದರಲ್ಲಿ ಅವರು ಬಯಸಿದ ಪರಿಮಳವನ್ನು ಮಿಶ್ರಣ ಮಾಡಿ, ಅವರು ತೋರಿಸಿದಂತಹ ವಿದೇಶೀ ಮೋಂಬತ್ತಿಯಂತುಹುದೇ ಮೋಂಬತ್ತಿಯನ್ನು ತಯಾರಿಸಿ, ರಿಲಯನ್ಸ್‌ಗೆ ಕಳುಹಿಸುವ ವ್ಯವಸ್ಥೆ ಮಾಡಿದರು.

ಸ್ಯಾಂಪಲ್ ನೋಡಿ ಅವರಿಗೆ ಬಹಳಷ್ಟು ತೃಪ್ತಿಯಾಯಿತು. ಭಾವೇಶ್ ಅವರಿಗೆ 20,000 ಮೋಂಬತ್ತಿಗಳನ್ನು ತಯಾರಿಸಿ ಸರಬರಾಜು ಮಾಡುವ ಆರ್ಡರ್ ಕೊಟ್ಟರು. ಒಂದು ಮೋಂಬತ್ತಿಯ ಬೆಲೆ ಸುಮಾರು 200 ರೂಪಾಯಿಗಳಾಗುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾದದ್ದು ಭಾವೇಶ್ ರಿಲಾಯನ್ಸ್‌ನಂತಹ ಕಾರ್ಪೊರೇಟ್ ಕಂಪನಿಯಿಂದ ಆರ್ಡರ್ ಪಡೆದಿದ್ದರು!

ಸಿಂದೋಡಾ ವರ್ಕ್‌ಶಾಪ್‌ಗೆ ಇಲ್ಲಿಯವರೆಗೂ ದೊರೆತ ಆರ್ಡರ್‌ಗಳಲ್ಲಿ ಇದು ಎಲ್ಲಕ್ಕಿಂತಲೂ ಹೆಚ್ಚಿನದಾಗಿತ್ತು. ಭಾವೇಶ್ ಅವರ ಪೂರಾ ತಂಡ ಬಲು ಕಠಿಣ ಶ್ರಮದಲ್ಲಿ ಆರ್ಡರ್ ಅನ್ನು ನಿಗದಿತ ಸಮಯದಲ್ಲಿ ತಯಾರಿಸಿ, ರಿಲಾಯನ್ಸ್ ಕಂಪನಿಗೆ ತಮ್ಮನ್ನು ಕುರಿತಂತೆ ಒಳ್ಳೆಯ ಅಭಿಪ್ರಾಯ ಮೂಡುವಂತೆ ಮಾಡಿದರು. ಇದರ ಪರಿಣಾಮವಾಗಿ, 2008ದಿಂದ ಆರಂಭವಾಗಿ ಇವತ್ತಿನವರೆಗೂ ಪ್ರತಿವರ್ಷ ಭಾವೇಶ್ ಅವರಿಗೆ ರಿಲಾಯನ್ಸ್ ಕಂಪನಿಯ ಕಡೆಯಿಂದ ನಿರಂತರವಾಗಿ ಮೋಂಬತ್ತಿಗಳನ್ನು ತಯಾರಿಸುವ ಆರ್ಡರ್ ಸಿಗುತ್ತಿದೆ. ಪ್ರತಿ ಬಾರಿಯೂ ಹೊಸದೇನಾದರೂ ವಿನ್ಯಾಸಗೊಳ್ಳುತ್ತದೆ. 20,000ದ ಸಂಖ್ಯೆಯಲ್ಲಿ ಅಂದು ದೊರೆತ ಆರ್ಡರ್ ಇಂದು ಒಂದೂವರೆ ಎರಡು ಲಕ್ಷ ಸಂಖ್ಯೆಯನ್ನೂ ತಲುಪಿದೆ. ಈ ರೀತಿಯ ಕಾರ್ಪೊರೇಟ್ ಆರ್ಡರ್‌ಗಳು ಸಿಗತೊಡಗಿದಾಗ, ಅವರ ಅಂಧ ಮಿತ್ರರ ತಂಡ ಕೂಡಾ ದೊಡ್ಡದಾಗತೊಡಗಿತು. ಹೆಚ್ಚು ಕೈಗಳಿಗೆ ಕೆಲಸ ನೀಡಲು ಸಾಧ್ಯವಾಯಿತು. ಅಂಧರು ಕಣ್ಣಿಲ್ಲ ಎಂದು ಭಿಕ್ಷೆ ಬೇಡ ಬೇಕಿರಲಿಲ್ಲ, ಕೈಯಿದೆ ಎಂದು ಅಭಿಮಾನದಿಂದ ದುಡಿದು ಮೇಲೆ ಬರುತ್ತಿದ್ದರು.

ಕಳೆದ ಹನ್ನೊಂದು ವರ್ಷಗಳಿಂದ ನಿರಂತರವಾಗಿ ಭಾವೇಶ್ ಅವರ ಸನ್‌ರೈಸ್ ಕ್ಯಾಂಡಲ್ಸ್ ಕಂಪನಿಗೆ ರಿಲಾಯನ್ಸ್ ಫೌಂಡೇಶನ್ 'ದೃಷ್ಟಿ' ಮತ್ತು ರಿಲಾಯನ್ಸ್ ಇಂಡಸ್ಟ್ರಿಗಳಿಂದ ಕೆಲಸ ಸಿಗುತ್ತಿದೆ. ಈ ಒಂದು ಆರ್ಡರ್‌ನಿಂದಲೇ ಅಂಧ ಮಿತ್ರರಿಗೆ ಮೂರ್ನಾಲ್ಕು ತಿಂಗಳುಗಳ ಉದ್ಯೋಗ ದೊರೆಯುತ್ತಿದೆ. ಇಷ್ಟು ವರ್ಷಗಳ ಸ್ನೇಹದಲ್ಲಿ, ಭಾವೇಶ್ ಅವರ ಸಮಯಬದ್ಧತೆ, ಗುಣಮಟ್ಟ ತೃಪ್ತಿಕರವಾಗಿದ್ದು, ಇಂದು ಆರ್ಡರ್ ಕಳುಹಿಸಿದ ತಕ್ಷಣವೇ ಕಚ್ಚಾ ವಸ್ತುವಿನ ಖರೀದಿಗೆಂದು ಶೇಕಡಾ 50ರಷ್ಟು ಹಣವನ್ನು ಪಾವತಿಸುತ್ತಾರೆ. ಉಳಿದದ್ದು ಅಂತಿಮ ಹಂತಕ್ಕೆ ಹೋದಂತೆ ತಲುಪುತ್ತದೆ. ಇದೇ ರೀತಿ ಅನೇಕ ಕಂಪನಿಗಳು 'ಸನ್‌ರೈಸ್ ಕ್ಯಾಂಡಲ್ಸ್'ಗೆ ಉಡುಗೊರೆಯ ವಸ್ತುಗಳನ್ನು ತಯಾರಿಸುವ ಕೆಲಸವನ್ನು ಕೊಡತೊಡಗಿದವು. ಭಾವೇಶ್ ಅವರ ಅಂಧ ಮಿತ್ರರ ತಂಡ ಹಿಗ್ಗಿತು, ದುಡಿವ ಕೈಗಳಿಗೆ ಬಿಡುವಿಲ್ಲದ ಕೆಲಸ. ಭಾವೇಶ್ ಮೈಕ್ರೋ ಮ್ಯಾನುಫ್ಯಾಕ್ಚರಿಂಗ್ ಯೂನಿಟ್‌ಗಳ ಬಗ್ಗೆ ಯೋಚಿಸಿದರು. ತಮ್ಮಲ್ಲಿ ಬಂದು ಕೆಲಸ ಮಾಡುವ ಅಂಧರಲ್ಲದೆ, ಸುತ್ತಮುತ್ತಲ ಹಳ್ಳಿಗಳಲ್ಲಿ ಮನೆ ಮನೆಯಲ್ಲಿಯೇ ಅಂಧರು ಮೋಂಬತ್ತಿಗಳನ್ನು ಮಾಡುವಂತೆ ಯೋಜಿಸಿದರು. ಈ ಮನೆ ಮನೆಯ ಮೈಕ್ರೋ ಯೂನಿಟ್‌ಗಳಿಗೆ ಕಚ್ಚಾ ಪದಾರ್ಥವನ್ನು ತಲುಪಿಸುವುದು, ತಯಾರಾದ ಮೋಂಬತ್ತಿಗಳನ್ನು ಸಂಗ್ರಹಿಸುವುದು, ಹಣವನ್ನು ಪಾವತಿ ಮಾಡುವುದು – ಈ ಎಲ್ಲ ಕಾರ್ಯ ವ್ಯವಸ್ಥೆಯನ್ನು ನಿಯೋಜಿಸಿದರು.

* * *

ಒಂದು ದಿನ ಮಹಾಬಲೇಶ್ವರದ ಮಾರ್ಕೆಟ್‌ನ ಅವರ ಸ್ಟಾಲ್ ಮುಚ್ಚುತ್ತಿರುವಾಗ, ಓರ್ವ ದಂಪತಿ ಅಲ್ಲಿಗೆ ಬಂದರು. ಭಾವೇಶ್ ಆಗಲೇ ಬಾಕ್ಸ್‌ಗಳಲ್ಲಿ ಮುಚ್ಚಿ ಇಟ್ಟಿದ್ದ ಮೋಂಬತ್ತಿಗಳನ್ನು ನೋಡಬಯಸಿದರು. ಮರುದಿನ ಬರುವಂತೆ ಭಾವೇಶ್ ಅವರಲ್ಲಿ ವಿನಂತಿ ಮಾಡಿಕೊಂಡರು. ಆದರೆ ಅವರಿಗೆ ಮರುದಿನ ಬೆಳಗ್ಗೆಯೇ ಅಹಮದಾಬಾದ್‌ಗೆ ಹಿಂತಿರುಗಿ ಹೋಗಬೇಕಿತ್ತು. ಭಾವೇಶ್ ಗ್ರಾಹಕರಿಗೆ ಎಂದೂ ಇಲ್ಲ ಎಂದವರಲ್ಲ. ನೀತಾ ಬಾಕ್ಸ್‌ಗಳನ್ನು ಪುನಃ ತೆರೆದರು. ಬೀದಿ ದೀಪದ ಕೆಳಗೆ ಅವನ್ನು ನೋಡಿ, ಮೋಂಬತ್ತಿಗಳನ್ನು ಖರೀದಿಸಿದರು. ಭಾವೇಶ್ ಕೊಟ್ಟ ವಿಸಿಟಿಂಗ್ ಕಾರ್ಡ್ ತೆಗೆದುಕೊಂಡು ಧನ್ಯವಾದ ಹೇಳಿ ಅವರು ಬೀಳ್ಕೊಟ್ಟರು.

ಸುಮಾರು ಹದಿನೈದು ದಿನಗಳ ನಂತರ ಭಾವೇಶ್ ಅವರಿಗೆ ಒಂದು ಪತ್ರ ಬಂದಿತು. ಅದರೊಡನೆ ಅಡ್ವೊಕೇಟ್ ಸತ್ಯೇನ್ ಭಾಯಿ ಠಕ್ಕರ್ ಅವರ ಹೆಸರಿನ ಒಂದು ಕಾರ್ಡ್ ಕೂಡಾ ಇತ್ತು. ಅವರು ಗುಜರಾತ್ ಹೈಕೋರ್ಟ್‌ನಲ್ಲಿ ಕೆಲಸ ಮಾಡುವ ನ್ಯಾಯವಾದಿ. ಅವರು 1500 ರೂಪಾಯಿಯ ಡ್ರಾಫ್ಟ್ ಕಳುಹಿಸಿದ್ದರು. ಇಷ್ಟು ಹಣ ಮೊತ್ತದ ಮೋಂಬತ್ತಿಗಳನ್ನು, ಅವರು ಬರೆದಿದ್ದ ಮುಂಬಯಿ ವಿಳಾಸಗಳಿಗೆ ತಲುಪಿಸಬೇಕಿತ್ತು. ವಿಳಾಸ ಆಶಾಪುರಾ ಇಂಡಸ್ಟ್ರಿಯದಾಗಿತ್ತು. ಅದು ಗಣಿ ಉದ್ಯಮದಲ್ಲಿದ್ದ ದೊಡ್ಡ ಕಾರ್ಖಾನೆ. ಸತ್ಯೇನ್ ಭಾಯಿ ಠಕ್ಕರ್ ಆ